ನ್ಯಾಷನಲ್ ಕಂಪನಿಯು ಇದುವರೆಗೆ ಅಂತಿಮಗೊಳಿಸಿರುವುದಿಲ್ಲ. ಆದುದರಿಂದ ಈ ಯೋಜನೆಯ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ನಿರೀಕ್ಷಿತ ದಿನಾಂಕವನ್ನು ತಿಳಿಸಲಾಗುವುದಿಲ್ಲ. ನಂಜನಗೂಡಿನಲ್ಲಿ ಖಾಸಗೀ ವಲಯದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 100 ಮೆ.ವ್ಯಾ ಸಾಮರ್ಥ್ಯದ ನ್ಯಾಫ್ತಾ ಆಧಾರಿತ ವಿದ್ಯುತ್ ಯೋಜನೆಗೆ ಈ ಯೋಜನೆಯನ್ನು ಕೈಗೊಳ್ಳಲು, ಸರ್ಕಾರದಿಂದ ಅನುಮತಿ ಪಡೆದಿರುವ ಮೆ: ಐಸಿಎಸ್‌ಪವರ್ ಕಂಪನಿಯು ವಿವರವಾದ ಯೋಜನಾ ವರದಿಯನ್ನು ತಾಂತ್ರಿಕ-ಆರ್ಥಿಕ ಒಪ್ಪಿಗೆ (ಟೆಕ್ನೊ-ಇಕಾನಮಿಕ್ ಕ್ಲಿಯರೆನ್ಸ್) ಗಾಗಿ ಕೇಂದ್ರ ವಿದ್ಯುತ್ ಪ್ರಾಧಿಕಾರದಿಂದ ತಾಂತ್ರಿಕ ಆರ್ಥಿಕ ಒಪ್ಪಿಗೆಯನ್ನು ನಿರೀಕ್ಷಿಸಲಾಗಿದೆ. ಈ ಉದ್ದೇಶಿತ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಅಕ್ಟೋಬರ್ 99ರ ಅಂತ್ಯದ ವೇಳೆಗೆ ಚಾಲನೆಗೊಳಿಸುವ ನಿರೀಕ್ಷೆ ಇದೆ.

ಭಟ್ಕಳ ವಲಯದಲ್ಲಿ ಅರಣ್ಯ ಜಮೀನು ಅತಿಕ್ರಮಣ

33 (132)

ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ವಲಯ ಅರಣ್ಯಾಧಿಕಾರಿ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಅವ್ಯವಹಾರಗಳ ಬಗ್ಗೆ ಆರೋಪಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅವರು ತಮ್ಮ ಸಂಬಂಧಿಕರ ಹೆಸರಿನಲ್ಲಿ ಅರಣ್ಯ ಜಮೀನು ಅತಿಕ್ರಮಣ ಮಾಡಿರುವುದು ನಿಜವೇ, ಈ ಬಗ್ಗೆ ಸರ್ಕಾರ ಅವರನ್ನು ವಿಚಾರಣೆಗೆ ಒಳಪಡಿಸಿದೆಯೇ ಹಾಗಿದ್ದಲ್ಲಿ ಅವರ ಮೇಲೆ ಕೈಗೊಂಡಿರುವ ಕ್ರಮವೇನು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಶ್ರೀ ಕೆ.ಎನ್.ನಾಯ್ಕ, ವನಪಾಲಕ, ಭಟ್ಕಳ ಇವರ ಹೆಂಡತಿ ಹೆಸರಿನಲ್ಲಿ ಅರಣ್ಯ ಭೂಮಿಯನ್ನು ಶಿರಾಲಿ: 11 ಅಸಸಂ.985 ಎ1ರಲ್ಲಿ 3ಹೆಕ್ಟೇರ್ ಭೂಮಿಯನ್ನು 1978ರ ಪೂರ್ವದಲ್ಲಿ ಅತಿಕ್ರಮಣ ಮಾಡಿಕೊಂಡ ಬಗ್ಗೆ ದಾಖಲೆ ಇರುತ್ತದೆ. ಈ ಕುರಿತು ನಾಗಪ್ಪ ಬಟ್ಟಪ್ಪ ನಾಯ್ಕ, ಸಾಕೀನ ಬಂಡೀಕಾಸಿ ಶಿರಾಲಿ 11 ಇವರು ತಕರಾರು ಅರ್ಜಿ ನೀಡಿರುವುದರಿಂದ ಸದರಿ ವಿಷಯದ ಕುರಿತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಭಟ್ಕಳ ಹಾಗೂ ವಲಯ ಅರಣ್ಯಾಧಿಕಾರಿ, ಭಟ್ಕಳರವರ ದಿನಾಂಕ 5-8-97ರಂದು

ವಿಚಾರಣೆ ನಡೆಸಿದ್ದು ಇರುತ್ತದೆ ಮತ್ತು ಸದರಿ ಊರ ನಾಗರೀಕರ, ಅರ್ಜಿದಾರರ, ವನಪಾಲಕ ಶ್ರೀ ಕೆ.ಎಸ್.ನಾಯ್ಕ ಹಾಗೂ ಅವರ ಹೆಂಡತಿಯ ಹೇಳಕೆಯನ್ನು ಪಡೆದು ಉಪಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ಇವರು ಅವರ ಮೇಲಾಧಿಕಾರಿಯವರಿಗೆ ವರದಿ ಸಲ್ಲಿಸಿದ್ದು, ಇರುತ್ತದೆ. ಹಾಗೂ ಸದ್ರಿ ಅತಿಕ್ರಮಣ ಸಕ್ರಮಗೊಳಿಸುವ ಪ್ರಕ್ರಿಯೆಯನ್ನು ತಡೆಹಿಡಿದಿದ್ದು ಇರುತ್ತದೆ. ಸದರಿ ವನಪಾಲಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.

ಭಟ್ಕಳ ತಾಲ್ಲೂಕಿನಲ್ಲಿ ಅಕ್ರಮ ಭೂಹಂಚಿಕೆ

34 (130)

ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕಿನಲ್ಲಿ ಕಂದಾಯ ಹಾಗೂ ಅರಣ್ಯ ಜಮೀನುಗಳೆಷ್ಟು?

ಆ) ಅರಣ್ಯ ಇಲಾಖೆ ಸಂಬಂಧಿಸಿದ ಜಮೀನಿಗೆ ಕಂದಾಯ ಇಲಾಖೆಯವರು ಪಟ್ಟಾ ನೀಡುತ್ತಿರುವ ವಿಷಯವು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಕಂದಾಯ ಜಮೀನು ಮತ್ತು ಅರಣ್ಯ ಜಮೀನು ಪ್ರತ್ಯೇಕತೆಯ ಬಗ್ಗೆ ಸಾರ್ವಜನಿಕರಿಗೆ ಸ್ಪಷ್ಟ ಪಡಿಸಲು ಸರ್ಕಾರದವರು ಕೈಗೊಂಡಿರುವ ಕಾರಣಗಳೇನು?

ಈ) ಕಂದಾಯ ಭೂಮಿಗೆ ಪಟ್ಟಾ ನೀಡುವಾಗ ಕೆಲವರಿಗೆ ಅನ್ಯಾಯವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳಾವುವು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಭಟ್ಕಳ ತಾಲ್ಲೂಕಿನಲ್ಲಿ

	ಎಕರೆ	ಗುಂ	ಚ
ಕಂದಾಯ ಜಮೀನು	3242	18	0
ಅರಣ್ಯ ಜಮೀನು	62666	20	10

ಆ) ಅರಣ್ಯ ಸಂರಕ್ಷಣಾ ಕಾಯಿದೆ ಬರುವ ಪೂರ್ವದಲ್ಲಿ ಹಂಗಾಮಿ ಲಾಗಣಿಗೆ ನೀಡಿದ ಅರಣ್ಯ ಜಮೀನಿಗೆ ಸರಕಾರದ ಆದೇಶ ಕ್ರಮಾಂಕ ಆರ್.ಡಿ.31 ಎಲ್.ಜಿ.ಎನ್